ಶ್ರೀ ಎಂ. ವಿ. ಕೃಷ್ಣಪ್ಪ.—ತುಮಕೂರಿನಲ್ಲಿ ಭೂಮಿ ಬಹಳ ಉತ್ಕೃಷ್ಟವಾದ ಭೂಮಿ. ಆದರೆ ಅಲ್ಲಿ ಕೊಡುವುದಕ್ಕೆ ಜಮೀನೇ ಇಲ್ಲ, ಅದೇ ಬಂದರುವುದು ಕಷ್ಟ.

ಶ್ರೀ ಟಿ. ಮಾದಯ್ಯ ಗೌಡ.—ಬೆಂಗಳೂರು ವಗೈರೆ 10 ಜಿಲ್ಲೆಗಳಲ್ಲಿ ಯಾವ ಸಮಾಚಾರವೂ ಇಲ್ಲ ಎಂದು ಹೇಳಿದ್ದೀರಿ. ಅಲ್ಲಿ ಈ ಬೆಳೆಗೆ ಉತ್ತೇಜನ ಕೊಡವೇ ಇರುವುದಕ್ಕೆ ವಿಶೇಷವಾದ ಕಾರಣಗಳೇನಾದರೂ ಇವೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕ್ಯಾಷ್ಯೂನಟ್ ಮತ್ತು ಪೆಪ್ಪರ್ ಬೆಂಗಳೂರು ಜಿಲ್ಲೆಯಲ್ಲಿ ಬೆಳೆಯುವುದಿಲ್ಲ. ಅದೂ ಅಲ್ಲದೆ ಇನ್ನೊಂದು ವಿಷಯ ಹೇಳಬೇಕಾಗಿದೆ. ಈ ಅಂಕಿ ಅಂಶಗಳನ್ನು ಕೊಟ್ಟಿರುವುದು ಎರಡು ವರ್ಷದ ಹಿಂದೆ ದಕ್ಷಿಣ ಕನ್ನಡವಲ್ಲಿ ಬಹಳ ಜಮೀನು ಇತ್ತು, 4–5 ವರ್ಷದ ಹಿಂದೆಯೇ ಈ ಸ್ಕೀಂ ಪ್ರಾರಂಭವಾದರಾಗಾಯ್ತು ಬೇಕಾದಷ್ಟು ಜಮೀನು ಕೊಚ್ಚಿದ್ದಾರೆ. ಈ ಎರಡು ವರ್ಷದಲ್ಲಿ ಕೊಚ್ಚಿರುವುದು ಸ್ವಲ್ಪ ಕಡಮೆಯಾಗಿ ಕಾಣುತ್ತದೆ ಅಷ್ಟೆ ಆದರೆ ಅದಕ್ಕೆ ಮುಂದೆ ಬಹಳಮ್ಮ ಕೊಚ್ಚಿದ್ದಾರೆ.

ಶ್ರೀ ಮಹಾಂತ ಸ್ವಾಮಿ.—ಹೈದ್ರಾಬಾದ್ ಕರ್ನಾಟಕದಲ್ಲಿ ಗೇರು ಬೀಜ ಬೆಳೆಯುವ ಭೂಮಿ ಸಿಕ್ಕುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಜಮೀನಿರಬಹುದು. ಆದರೆ ಅಲ್ಲಿನ ಜನರಿಗೆ ಇದರ ಅನುಭವ ಇಲ್ಲ.

ಶ್ರಿ ಎ. ಕೃಷ್ಣಶೆಟ್ಟಿ.—ಉಳ್ಳಾಳದಲ್ಲಿ ಈಗ ಒಂದು ಗೇರುಬೀಜದ ರಿಸರ್ಚ್ ಸೆಂಟರಿದೆ. ಗೇರು ಬೀಜದ ಸಸಿಗಳ ಉತ್ಪನ್ನಕ್ಕೆ ಏನು ಕಾರ್ಯಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರಿಸರ್ಚ್ ಸೆಂಟರನ್ನು ಅಭಿವೃದ್ಧಿಪಡಿಸಿ ಅಲ್ಲಿಂದ 1961–62ರಲ್ಲಿ ಉಚಿತವಾಗಿ 81ಲಕ್ಷ ಸಸಿಗಳನ್ನು ಹಂಚಿಸಿದ್ದೇವೆ. ಮತ್ತೆ 1962–63ರಲ್ಲಿ 60 ಸಾವಿರ ಗೇರು ಬೀಜದ ಸಸಿಗಳನ್ನು ಹಂಚಿಸಿದ್ದೇವೆ.

Report of the Investigation of Kambadakada Project in Coorg District.

*Q.—824. **Sri A. P. APPANNA** (Virajpet).—

Will the Government be pleased to state:—

(*a*) whether they have received any report of the investigation of the Kambadakada Project in Coorg District;

(*b*) if so, whether they have taken any decision on the same;

(*c*) if not whether the Government is aware of the reported public statement of the Transport and Labour Minister to the effect that the said dam is going to be constructed by the Government;

(*d*) if the Government has not taken any decision, how long it will take for them to arrive at a decision ?

*A.—**Sri S. NIJALINGAPPA** (Chief Minister).—

(*a*) Original Project was recieved in 1960. Revised Project is still awaited.

(*b*) No.

(*c*) Yes.

(*d*) Soon after the further investigations of revised scheme are completed.

Sri A. P. APPANNA.—When the Government have not taken a decision and they are still awaiting the revised project, does the statement of the Transport and Labour Minister represent the opinion of Government ?

† **Sri S. NIJALINGAPPA.**—He has expressed an opinion as to the possibility of the scheme.

ಶ್ರೀ ಎಂ. ಸಿ. ಬನಪ್ಪ.—ಈ ಕಂಬದಕಡ ಯೋಜನೆ ಮೂರನೆ ಯೋಜನೆಯಲ್ಲಿ ಸೇರಿರಲಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಸೇರಿನಲಾಗಿತ್ತು. ಆದರೆ ಆ ಹಳೆ ಕಂಬದಕಡ ಯೋಜನೆ ಸರಿಯಿಲ್ಲ. ಅದನ್ನು ಇನ್ನೂ ಹೆಚ್ಚು ನೀರು ಹಿಡಿಸುವಂತೆ ಮಾಡಬೇಕೆಂದು 1961ರಲ್ಲಿ ಆಲ್ಟರ್‌ನೇಟೀವ್ ಸ್ಕೀಮನ್ನು ಮಾಡಿ ಇನ್ನೂ ಹೆಚ್ಚು ನೀರು ಹಿಡಿಸುವಂತೆ ಮಾಡಬೇಕೆಂದು ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಆ ವಿಚಾರಗಳು ಇನ್ನೂ ಪರಿಶೀಲನೆಯಲ್ಲಿವೆ.

Sri A. P. APPANNA.—What are the alternative schemes that are before the Government ?

Sri S. NIJALINGAPPA.—The schemes that are being now investigated are proposed diversion weir at a site slightly above the present Kambadakada site and another storage reservoir in the vicinity of K. R. Sagar near Kattepura.

ಶ್ರೀ ಎಸ್. ಆವಲರೆಡ್ಡಿ.—ನಾಲ್ಕು ವರ್ಷಗಳಾದರೂ ರಿವೈಜ್ ಮಾಡುವುದಕ್ಕೆ ಇನ್ನೂ ಸಾಧ್ಯವಾಗಲಿಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಅಷ್ಟು ಸುಲಭವಾಗಿ ಆಗತಕ್ಕ ಕೆಲಸವಲ್ಲ; 1961ರಲ್ಲೇ ಪ್ರಾರಂಭ ಮಾಡಿದ್ದಾರೆ. ಒಂದು ಪೂರೈಸಿದೆ. ಇನ್ನೊಂದು ಕೆಲಸ ನಡೆಯುತ್ತಿದೆ.

ಶ್ರೀ ಎ.ಕೃಷ್ಣಶೆಟ್ಟಿ.—ಕಾವೇರಿ ನೀರಿನ ಬಗ್ಗೆ ನವ.ಗೂ ಮದ್ರಾಸಿನವರಿಗೂ ಒಪ್ಪಂದ ಇರುವುದರಿಂದ ಅದಷ್ಟು ಬೇಗ ಈ ಕಾವೇರಿ ನೀರನ್ನು ನಾವು ಉಪಯೋಗ ಮಾಡಿಕೊಳ್ಳುವುದು ಒಳ್ಳೆಯದಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಮಾನ್ಯ ಸದಸ್ಯರ ಅಭಿಪ್ರಾಯ.

ಶ್ರೀ ಎಂ. ಸಿ. ಬನಪ್ಪ.—ಆಲ್ಟರ್‌ನೇಟ್ ಸ್ಕೀಮುಗಳು ನಿರ್ಧರವಾಗಿವೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಆಲ್ಟರ್‌ನೇಟೀವ್ ಸ್ಕೀಮುಗಳಿವೆ ಎಂದು ನಾನಾಗಲೆ ಹೇಳಿದೆನು.

ಶ್ರೀ ಜಿ. ಎ. ತಿಮ್ಮಪ್ಪ ಗೌಡ.—ಕಟ್ಟೇಪುರದ ಅಣೆಕಟ್ಟಿನ ವಿವರಗಳು ದೊರೆಯುತ್ತವೆಯೆ ?

ಶ್ರೀ ಎಸ್. ನಿಜಲಿಂಗಪ್ಪ.—ಇದಕ್ಕೆ ಸುಮಾರು ಎರಡು ಕೋಟಿ ಅರವತ್ತು ಲಕ್ಷ ಖರ್ಚಾಗುತ್ತೆ. ಈಗ ಇರತಕ್ಕ 20 ಸಾವಿರ ಎಕರೆಗಳ ಜೊತೆಗೆ ಇನ್ನೂ 5 ಸಾವಿರ ಎಕರೆಗೆ ಹೆಚ್ಚಿಗೆ ನೀರು ದೊರೆಯುತ್ತದೆ. ಇದರಿಂದ ಇಷ್ಟು ಅನುಕೂಲವಿದೆ.

Constitution of a Committee to deal with the rehabilitation work of the ryots of Hidkal Dam in Hukkeri taluk.

*Q.—1016. **Sri K. H. RANGANATH** (Mudigere).—

Will the Government be pleased to state :—

(*a*) whether any Committee has been constituted to deal with the rehabilitation work of the ryots of the Hidkal Dam in Hukkeri Taluk, whose lands have been submerged ;

(*b*) if so, the total number of Scheduled Castes persons that are nominated to the above Committee ?

A.— **Sri S. NIJALINGAPPA** (Chief Minister).—

(*a*) Yes, a Sub-Committee of the Ghataprabha Project Advisory Board has been constituted.

(*b*) None.

ಶ್ರೀ ಕೆ. ಎಚ್. ರಂಗನಾಥ್.—ಹಿಡ್ಕಲ್ ಅಣೆಕಟ್ಟಿನಿಂದ ನೀರು ಮುಳುಗಾಗತಕ್ಕ ಜಮೀನೆಷ್ಟು ?

† ಶ್ರೀ ಎಸ್. ನಿಜಲಿಂಗಪ್ಪ.—ಆ ಫಿಗರ್ಸು ಈಗ ನನ್ನಲ್ಲಿಲ್ಲ.